**ಕರ್ನಾಟಕ ವಿಧಾನ ಪರಿಷತ್ತು**
**ನೂರ ಐವತ್ತೈದನೆಯ ಅಧಿವೇಶನ**

# ನೋಂದಣಿ (ಕರ್ನಾಟಕ ತಿದ್ದುಪಡಿ) ವಿಧೇಯಕ, 2025

**(2025ರ ವಿಧಾನಸಭೆಯ ವಿಧೇಯಕ ಸಂಖ್ಯೆ–13)**

**(ಕರ್ನಾಟಕ ವಿಧಾನಸಭೆಯಿಂದ ಅಂಗೀಕಾರವಾದ ರೂಪದಲ್ಲಿ)**

ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) ನ್ನು ಮತ್ತಷ್ಟು ತಿದ್ದುಪಡಿ ಮಾಡಲು ಒಂದು ವಿಧೇಯಕ.

ಇಲ್ಲಿ ಇನ್ನುಮುಂದೆ ಕಂಡುಬರುವ ಉದ್ದೇಶಗಳಿಗಾಗಿ ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16)ನ್ನು ಮತ್ತಷ್ಟು ತಿದ್ದುಪಡಿ ಮಾಡುವುದು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಎಪ್ಪತ್ತಾರನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗಲಿ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ನೋಂದಣಿ (ಕರ್ನಾಟಕ ತಿದ್ದುಪಡಿ) ಅಧಿನಿಯಮ, 2025 ಎಂದು ಕರೆಯತಕ್ಕದ್ದು.

(2) ಇದು ರಾಜ್ಯ ಸರ್ಕಾರವು ಸರ್ಕಾರಿ ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ ದಿನಾಂಕದಂದು ಜಾರಿಗೆ ಬರತಕ್ಕದ್ದು.

**2. ಪ್ರಕರಣ 17ರ ತಿದ್ದುಪಡಿ.-** ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16) (ಇದರಲ್ಲಿ ಇನ್ನುಮುಂದೆ ಮೂಲ ಅಧಿನಿಯಮವೆಂದು ಉಲ್ಲೇಖಿಸಲಾಗಿದೆ)ರ 17ನೇ ಪ್ರಕರಣದಲ್ಲಿ,-

(i) (1)ನೇ ಉಪ-ಪ್ರಕರಣದಲ್ಲಿನ (ಇ) ಖಂಡದ ತರುವಾಯ ಪರಂತುಕಕ್ಕೆ ಮೊದಲು ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(ಎಫ್) ಪ್ರತಿಫಲದೊಂದಿಗೆ ಅಥವಾ ಇಲ್ಲದೆ ಸ್ಥಿರಾಸ್ತಿಯ ವರ್ಗಾವಣೆಯನ್ನು ಅಧಿಕೃತಗೊಳಿಸುವ ಮುಖ್ತ್ಯಾರನಾಮೆ (power of attorney)."

(ii) (2)ನೇ ಉಪ-ಪ್ರಕರಣದ (vii)ನೇ ಖಂಡ ಮತ್ತು ಅದಕ್ಕೆ ಸಂಬಂಧಿಸಿದ ನಮೂದುಗಳನ್ನು ಬಿಟ್ಟುಬಿಡತಕ್ಕದ್ದು.

**3. ಪ್ರಕರಣ 33ರ ತಿದ್ದುಪಡಿ.-** ಮೂಲ ಅಧಿನಿಯಮದ 33ನೇ ಪ್ರಕರಣದ (4)ನೇ ಉಪ-ಪ್ರಕರಣದಲ್ಲಿ,-

(i) "ರುಜುವಾತುಪಡಿಸಬಹುದು" ಎಂಬ ಪದಗಳ ಬದಲಿಗೆ "ರುಜುವಾತುಪಡಿಸತಕ್ಕದ್ದು" ಎಂಬ ಪದಗಳನ್ನು ಪ್ರತಿಯೋಜಿಸತಕ್ಕದ್ದು; ಮತ್ತು

(ii) (4)ನೇ ಉಪ-ಪ್ರಕರಣದ ತರುವಾಯ ಈ ಮುಂದಿನ ಪರಂತುಕವನ್ನು ಸೇರಿಸತಕ್ಕದ್ದು, ಎಂದರೆ:-

"ಪರಂತು ಮುಖ್ತ್ಯಾರನಾಮೆಯನ್ನು ಬರೆದುಕೊಡುವ ವ್ಯಕ್ತಿಯು ಬದುಕಿರುವ ಕುರಿತು ಪುರಾವೆಯನ್ನು ಈ ಅಧಿನಿಯಮದಡಿ ಮಾಡಲಾದ ನಿಯಮಗಳಲ್ಲಿ ನಿರ್ದಿಷ್ಟಪಡಿಸಿದಂತೆ ಹಾಜರುಪಡಿಸತಕ್ಕದ್ದು."

**4. ಪ್ರಕರಣ 89ರ ತಿದ್ದುಪಡಿ.-** ಮೂಲ ಅಧಿನಿಯಮದ 89ನೇ ಪ್ರಕರಣದ (4)ನೇ ಉಪ-ಪ್ರಕರಣದ ತರುವಾಯ ಈ ಮುಂದಿನದನ್ನು ಸೇರಿಸತಕ್ಕದ್ದು, ಎಂದರೆ:-

"(5) 88ನೇ ಪ್ರಕರಣದಲ್ಲಿ ಅಧಿಸೂಚಿಸಲಾದಂತೆ, ಸರ್ಕಾರಿ ಅಧಿಕಾರಿಗಳು ಅಥವಾ ಕೆಲವು ಸಾರ್ವಜನಿಕ ಕಾರ್ಯಕರ್ತರು ಬರೆದುಕೊಡುವ ದಸ್ತಾವೇಜುಗಳು, ಯಾರ ಸ್ಥಳೀಯ ಪರಿಮಿತಿಗಳೊಳಗೆ ದಸ್ತಾವೇಜಿನಲ್ಲಿ ಒಳಗೊಂಡಿರುವ ಸ್ಥಿರ ಸ್ವತ್ತಿನ ಸಂಪೂರ್ಣ ಅಥವಾ ಯಾವುದೇ ಭಾಗವು ಇರುವುದೋ ಆ ಅಧಿಕಾರವ್ಯಾಪ್ತಿಯ ನೋಂದಣಿ ಅಧಿಕಾರಿಗೆ ದಸ್ತಾವೇಜುಗಳನ್ನು ವಿದ್ಯುನ್ಮಾನವಾಗಿ ಕಳುಹಿಸತಕ್ಕದ್ದು, ಹಾಗೂ ಅಂಥ ಅಧಿಕಾರಿಯು ಆತನ ಯುಕ್ತ ಪುಸ್ತಕ ಸಂಖ್ಯೆಯಲ್ಲಿ ಸದರಿ ವಿದ್ಯುನ್ಮಾನ ದಸ್ತಾವೇಜನ್ನು ದಾಖಲಿಸತಕ್ಕದ್ದು ಮತ್ತು ವಿದ್ಯುನ್ಮಾನವಾಗಿ ಅದನ್ನು ಸಂರಕ್ಷಿಸತಕ್ಕದ್ದು .

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ
## (ವಿಧೇಯಕವನ್ನು ಮಂಡಿಸಿದಾಗ ಲಗತ್ತಿಸಿದಂತೆ)

ಕರ್ನಾಟಕ ರಾಜ್ಯಕ್ಕೆ ಅನ್ವಯವಾಗುವಂತೆ ನೋಂದಣಿ ಅಧಿನಿಯಮ, 1908 (1908ರ ಕೇಂದ್ರ ಅಧಿನಿಯಮ 16)ನ್ನು ಈ ಮುಂದಿನವುಗಳಿಗಾಗಿ,-

(1) ಪ್ರತಿಫಲದೊಂದಿಗೆ ಅಥವಾ ಇಲ್ಲದೆ ಸ್ಥಿರಸ್ವತ್ತಿನ ವರ್ಗಾವಣೆಯ ಮುಖ್ತ್ಯಾರನಾಮೆ (power of attorney)ಯನ್ನು ಕಡ್ಡಾಯವಾಗಿ ನೋಂದಾಯಿಸಲು;

(2) ಸರ್ಕಾರದ ಮೂಲಕ ಮಂಜೂರಾದ ಸ್ಥಿರಸ್ವತ್ತಿಗೆ ಸಂಬಂಧಿಸಿದ ದಸ್ತಾವೇಜುಗಳನ್ನು ಕಡ್ಡಾಯವಾಗಿ ನೋಂದಾಯಿಸಲು;

(3) ಯಾವುದೇ ಮುಖ್ತ್ಯಾರನಾಮೆ (power of attorney)ಯನ್ನು ಹಾಜರುಪಡಿಸುವುದರ ಮೂಲಕ ಕಡ್ಡಾಯವಾಗಿ ರುಜುವಾತುಪಡಿಸಲು;

(4) 88ನೇ ಪ್ರಕರಣದಡಿಯಲ್ಲಿ ಅಧಿಸೂಚಿಸಲಾದಂತೆ ಸರ್ಕಾರಿ ಅಧಿಕಾರಿಗಳು ಅಥವಾ ಕೆಲವು ಸಾರ್ವಜನಿಕ ಕಾರ್ಯಕರ್ತರ ಮೂಲಕ ದಸ್ತಾವೇಜುಗಳನ್ನು ವಿದ್ಯುನ್ಮಾನವಾಗಿ ನೋಂದಣಿ ಅಧಿಕಾರಿಗೆ ಕಳುಹಿಸಲು; ಮತ್ತು

(5) ಕೆಲವು ಇತರೆ ಆನುಷಂಗಿಕ ತಿದ್ದುಪಡಿಗಳನ್ನು ಸಹ ಮಾಡಲು,

- ಅವಶ್ಯಕವೆಂದು ಪರಿಗಣಿಸಲಾಗಿದೆ.

ಆದ್ದರಿಂದ ಈ ವಿಧೇಯಕ.

## **ಆರ್ಥಿಕ ಜ್ಞಾಪನ ಪತ್ರ**

ಪ್ರಸ್ತಾವಿತ ಶಾಸನಾತ್ಮಕ ಕ್ರಮವು ಯಾವುದೇ ಹೆಚ್ಚಿನ ವೆಚ್ಚವನ್ನು ಒಳಗೊಂಡಿರುವುದಿಲ್ಲ.

**ಕೃಷ್ಣ ಭೈರೇಗೌಡ**
ಕಂದಾಯ ಮಂತ್ರಿ

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

# ಅನುಬಂಧ
# ನೋಂದಣಿ ಅಧಿನಿಯಮ, 1908
# (1908ರ ಕೇಂದ್ರ ಅಧಿನಿಯಮ 16)ರ ಉದ್ಧೃತ ಭಾಗ

X X XX XX

**17. ನೋಂದಣಿಯು ಕಡ್ಡಾಯವಾಗಿರುವಂಥ ದಸ್ತಾವೇಜಗಳು.**- (i) ಈ ಕೆಳಕಂಡ ದಸ್ತಾವೇಜಗಳನ್ನು, ಅವು ಸಂಬಂಧಪಡುವಂಥ ಸ್ವತ್ತು 1864ರ ಅಧಿನಿಯಮ ಸಂಖ್ಯೆ XVI ಅಥವಾ ಭಾರತದ ನೋಂದಣಿ ಅಧಿನಿಯಮ. 1866 (1866ರ 20) ಅಥವಾ ಭಾರತದ ನೋಂದಣಿ ಅಧಿನಿಯಮ, 1871 (1871ರ 8) ಅಥವಾ ಭಾರತದ ನೋಂದಣಿ ಅಧಿನಿಯಮ, 1877(1877ರ 3) ಅಥವಾ ಭಾರತದ ನೋಂದಣಿ ಅಧಿನಿಯಮ. ಇದ್ದರೆ ಮತ್ತು ಅವುಗಳನ್ನು ಈ ಅಧಿನಿಯಮಗಳು ಜಾರಿಗೆ ಬಂಧಂಥ ದಿನಾಂಕದಂದು ಅಥವಾ ಆ ತರುವಾಯ ಬರೆದು ಕೊಟ್ಟಿದ್ದರೆ ನೋಂದಣಿ ಮಾಡತಕ್ಕದ್ದು, ಎಂದರೆ:-

(ಎ) ಸ್ಥಿರಸ್ವತ್ತಿನ ದಾನಪತ್ರಗಳು;

(ಬಿ) ಸ್ಥಿರಸ್ವತ್ತಿಗೆ ಅಥವಾ ಅದರಲ್ಲಿ ಒಂದು ನೂರ ರೂಪಾಯಿಗಳ ಮತ್ತು ಅದಕ್ಕೂ ಮೇಲ್ಪಟ್ಟ ಮೌಲ್ಯದ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಅದು ನಿಹಿತವಗಿರಲಿ ಅಥವಾ ಅವಲಂಬಿತವಾಗಿರಲಿ, ಈಗಾಗಲಿ ಅಥವಾ ಮುಂದಾಗಲಿ ಸೃಜಿಸಲು, ಘೋಸಿಷಲು ಹಸ್ತಾಂತರಿಸಲು , ಪರಿಮಿತಿಗೊಳಿಸಲು ಅಥವಾ ಅಂತ್ಯಗೊಳಿಸುವಂತೆ ತಾತ್ಪರ್ಯವಾಗುವಂಥ ಅಥವಾ ಪ್ರವರ್ತಿಸುವಂಥ ಇತರ ಮರಣ ಶಾಸನೇತರ ಪತ್ರಗಳು:

(ಸಿ) ಯಾವುದೇ ಅಂಥ ಹಕ್ಕು ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಸೃಜಿಸುವ, ಘೋಷಿಸುವ, ಹಸ್ತಾಂತರಿಸುವ ಪರಿಮಿತಿಗೊಳಿಸುವ ಅಥವಾ ಅಂತ್ಯಗೊಳಿಸುವುದರ ಕಾರಣದಿಂದಾಗಿ ಯಾವುದೇ ಪ್ರತಿಫಲದ ಸ್ವೀಕಾರ ಅಥವಾ ಸಂದಾಯವನ್ನು ಒಪ್ಪುವಂಥ ಮರಣ ಶಾಸನೇತರ ಪತ್ರಗಳು: ಮತ್ತು

(ಡಿ) ವರ್ಷದಿಂದ ವರ್ಷಕ್ಕೆ ಅಥವಾ ಒಂದು ವರ್ಷವನ್ನು ಮೀರುವ ಯಾವುದೇ ಅವಧಿಗಾಗಿ ಅಥವಾ ವಾರ್ಷಿಕ ಬಾಡಿಗೆಯನ್ನು ಮೀಸಲಿಡುವ ಗೇಣಿಗಳು;

(ಇ) ಸ್ಥಿರಸ್ವತ್ತಿಗೆ ಅಥವಾ ಅದರಲ್ಲಿ ಒಂದು ನೂರ ರೂಪಾಯಿಗಳ ಮತ್ತು ಅದಕ್ಕೂ ಮೇಲ್ಪಟ್ಟ ಮೌಲ್ಯದ ಯಾವುದೇ ಹಕ್ಕು, ಸ್ವಾಮ್ಯ ಅಥವಾ ಹಿತಾಸಕ್ತಿಯನ್ನು ಅದು ನಿಹಿತವಗಿರಲಿ ಅಥವಾ ಅವಲಂಬಿತವಾಗಿರಲಿ, ಈಗಾಗಲಿ ಅಥವಾ ಮುಂದಾಗಲಿ ಸೃಜಿಸಲು, ಘೋಸಿಷಲು ಹಸ್ತಾಂತರಿಸಲು , ಪರಿಮಿತಿಗೊಳಿಸಲು ಅಥವಾ ಅಂತ್ಯಗೊಳಿಸುವಂತೆ ತಾತ್ಪರ್ಯವಾಗುವ ಅಥವಾ ಪ್ರವರ್ತಿಸುವಂಥ ನ್ಯಾಯಾಲಯದ ಯಾವುದೇ ಡಿಕ್ರಿ ಅಥವಾ ಆದೇಶ ಅತವಾ ಯಾವುದೇ ಐತೀರ್ಪನ್ನು ವರ್ಗಾಯಿಸುವ, ಹಸ್ತಾಂತರಿಸುವ ಮರಣ ಶಾಸನೇತರ ಪತ್ರಗಳು:

ಪರಂತು ರಾಜ್ಯ ಸರ್ಕಾರವು, ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಿಸಿದ ಆದೇಶದ ಮೂಲಕ ಈ ಉಪ-ಪ್ರಕರಣದ ಪ್ರವರ್ತನೆಯಿಂದ, ಯಾವ ಗೇಣಿಗಳ ಮೂಲಕ ಕೊಟ್ಟ ಅವಧಿಗಳು ಐದು ವರ್ಷಗಳನ್ನು ಮೀರುವುದಿಲ್ಲವೋ ಮತ್ತು ಯಾವ ಗೇಣಿಯ ಮೂಲಕ ಮೀಸಲಿರಿಸಿದ ವಾರ್ಷಿಕ ಬಾಡಿಗೆಗಳು ಐವತ್ತು ರೂಪಾಯಿಗಳನ್ನು ಮೀರುವುದಿಲ್ಲವೋ ಆ ಯಾವುದೇ ಗೇಣಿಗಳನ್ನು ಯಾವುದೇ ಜಿಲ್ಲೆಯಲ್ಲಿ ಅಥವಾ ಜಿಲ್ಲೆಯ ಭಾಗದಲ್ಲಿ ವಿನಾಯಿಸಿಗೊಳಿಸಬಹುದು.

X X XX XX

(2) (1) ನೇ ಉಪ- ಪ್ರಕರಣದ (ಖ) ಮತ್ತು (ಗ) ಖಂಡಗಳಲ್ಲಿ ಇರುವುದು ಯಾವುದೂ,-

X X XX XX

(vii) ಸರ್ಕಾರದಿಂದ ಸ್ಥಿರಸ್ವತ್ತಿನ ಯಾವುದೇ ಮಂಜೂರಾತಿ ; ಅಥವಾ

X X XX XX

**33. 32ನೇ ಪ್ರಕರಣದ ಉದ್ದೇಶಗಳಿಗಾಗಿ ಮಾನ್ಯ ಮಾಡಬಹುದಾದ ಮುಖ್ತ್ಯಾರನಾಮೆ:-**

X X XX XX

(4) ಈ ಪ್ರಕರಣದಲ್ಲಿ ಮುಂದಿನ ಯಾವುದೇ ಮುಖ್ತ್ಯಾರನಾಮೆಯನ್ನು ಈ ಬಗ್ಗೆ ಇಲ್ಲಿ ಈ ಹಿಂದೆ ನಮೂದಿಸಿದ ವ್ಯಕ್ತಿ ಅಥವಾ ನ್ಯಾಯಾಲಯದ ಮುಂದೆ ಅದನ್ನು ಬರೆದುಕೊಡಲಾಗಿದೆ. ಮತ್ತು

ಅಧಿಪ್ರಮಾಣಗೊಳಿಸಲಾಗಿದೆ. ಎಂದು ಮೇಲುನೋಟಕ್ಕೆ ತಾತ್ಪರ್ಯವಾದಾಗ ಹೆಚ್ಚಿನ ಸಾಕ್ಷ್ಯವನ್ನು ಹಾಜರ್ಪಡಿಸದೆಯೇ ರುಜುವಾತುಪಡಿಸಬಹುದು.

**X X XX XX**

**89. ಕೆಲವು ಆದೇಶಗಳ, ಪ್ರಮಾಣ ಪತ್ರಗಳ ಮತ್ತು ಪತ್ರಗಳ ಪ್ರತಿಗಳನ್ನು ನೋಂದಣಿ ಅಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಅವುಗಳನ್ನು ದಾಖಲ್ಮಾಡತಕ್ಕದ್ದು.-** (1) ಭೂ ಮೇಲ್ಮಾಟು ಸಾಲಗಳ ಅಧಿನಿಯಮ 1883ರ(1883ರ-19) ಮೇರೆಗೆ ಸಾಲವನ್ನು ಮಂಜೂರು ಮಾಡುವ ಪ್ರತಿಯೊಬ್ಬ ಅಧಿಕಾರಿಯು ಯಾವ ನೋಂದಣಿ ಅಧಿಕಾರಿಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಮೇಲ್ಮಾಟು ಮಾಡಬೇಕಾದ ಅಥವಾ ಸಹಭದ್ರುತೆಗಾಗಿ ಕೊಡಬೇಕಾದ ಭೂಮಿಯ ಪೂರ್ಣ ಅಥವಾ ಅದರ ಯಾವುದೇ ಭಾಗವು ಇರುವುದೋ ಆ ನೋಂದಣಿ ಅಧಿಕಾರಿಗೆ ಅವನ ಆದೇಶದ ಪ್ರತಿಯನ್ನು ಕಳುಹಿಸತಕ್ಕದ್ದು ಮತ್ತು ಅಂಥ ನೋಂದಣಿ ಅಧಿಕಾರಿಯು, ಆ ಪ್ರತಿಯನ್ನು ಅವನ ಪುಸ್ತಕ ಸಂಖ್ಯೆ-1ರಲ್ಲಿ ದಾಖಲ್ಮಾಡತಕ್ಕದ್ದು,

(2) ಸಿವಿಲ್ ಪ್ರಕ್ರಿಯಾ ಸಂಹಿತ 1908ರ (1908ರ 5) ಮೇರೆಗೆ ಸ್ಥಿರಸ್ವತ್ತಿನ ಮಾರಾಟದ ಪ್ರಮಾಣ ಪತ್ರವನ್ನು ಮಂಜೂರು ಮಾಡಲು ಪ್ರತಿಯೊಂದು ನ್ಯಾಯಾಲಯವು ಅಂಥ ಪ್ರಮಾಣ ಪತ್ರದಲ್ಲಿ ಒಳಗೊಂಡ ಸ್ಥಿರಸ್ವತ್ತಿನ ಪೂರ್ಣ ಅಥವಾ ಯಾವುದೇ ಭಾಗವು ಯಾವ ನೋಂದಣಿ ಅಧಿಕಾರಿಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಇರುವುದೋ ಆ ನೋಂದಣಿ ಅಧಿಕಾರಿಗೆ ಅಂಥ ಪ್ರಮಾಣ ಪತ್ರದ ಪ್ರತಿಯನ್ನು ಕಳುಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಅದನ್ನು ಅವನ ಪುಸ್ತಕ ಸಂಖ್ಯೆ 1 ರಲ್ಲಿ ದಾಖಲ್ಮಾಡತಕ್ಕದ್ದು.

(3) ಕೃಷಿಕರ ಸಾಲಗಳ ಅಧಿನಿಯಮ, 1884 (1884ರ 12) ಮೇರೆಗೆ ಸಾಲವನ್ನು ಮಂಜೂರು ಮಾಡುವ ಪ್ರತಿಯೊಬ್ಬ ಅಧಿಕಾರಿಯು ಆ ಸಾಲದ ಮರುಪಾವತಿಯನ್ನು ಭದ್ರಗೊಳಿಸುವ ಉದ್ದೇಶಕ್ಕಾಗಿ ಸ್ಥಿರಸ್ವತ್ತನ್ನು ಅಡಮಾನ ಮಾಡಲಾಗುವುದೋ ಆ ಯಾವುದೇ ಪತ್ರದ ಪ್ರತಿಯನ್ನು ಮತ್ತು ಅಂಥ ಯಾವುದೇ ಸ್ವತ್ತನ್ನು ಆ ಸಾಲವನ್ನು ಮಂಜೂರು ಮಾಡುವ ಆದೇಶದಲ್ಲಿ ಅದೇ ಉದ್ದೇಶಕ್ಕಾಗಿ ಅಡಮಾನ ಮಾಡಿದ್ದರೆ ಆ ಆದೇಶದ ಪ್ರತಿಯನ್ನು ಸಹ ಯಾವ ನೋಂದಣಿ ಅಧಿಕಾರಿಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಯೊಳಗೆ ಹಾಗೆ ಅಡಮಾನ ಮಾಡಿದ ಸ್ವತ್ತಿನ ಆಸ್ತಿಯ ಪೂರ್ಣ ಅಥವಾ ಯಾವುದೇ ಭಾಗವು ಇರುವುದೋ ಆ ಯಾವನೇ ನೋಂದಣಿ ಅಧಿಕಾರಿಗೆ ಕಳುಹಿಸತಕ್ಕದ್ದು ಮತ್ತು ಅಂಥ ನೋಂದಣಿ ಅಧಿಕಾರಿಯು ಅವನ ಪುಸ್ತಕ ಸಂಖ್ಯೆ 1ರಲ್ಲಿ ಸಂದರ್ಭಾನುಸಾರ ಪ್ರತಿಯನ್ನು ಅಥವಾ ಪ್ರತಿಗಳನ್ನು ದಾಖಲ್ಮಾಡತಕ್ಕದ್ದು.

(4) ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಿದ ಸ್ಥಿರಸ್ವತ್ತಿನ ಖರೀದಿದಾರನಿಗೆ ಮಾರಾಟದ ಪ್ರಮಾಣಪತ್ರವನ್ನು ನೀಡುವ ಪ್ರತಿಯೊಬ್ಬ ರೆವಿನ್ಯೂ ಅಧಿಕಾರಿಯು ಯಾವ ನೋಂದಣಿ ಅಧಿಕಾರಿಯ ಅಧಿಕಾರ ವ್ಯಾಪ್ತಿಯ ಸ್ಥಳೀಯ ಪರಿಮಿತಿಗಳೊಳಗೆ ಪ್ರಮಾಣಪತ್ರದಲ್ಲಿ ಒಳಗೊಂಡ ಸ್ವತ್ತಿನ ಪೂರ್ಣ ಅಥವಾ ಯಾವುದೇ ಭಾಗವು ಇರುವುದೋ ಆ ಯಾವನೇ ನೋಂದಣಿ ಅಧಿಕಾರಿಗೆ ಪ್ರಮಾಣಪತ್ರದ ಪ್ರತಿಯನ್ನು ಕಳುಹಿಸತಕ್ಕದ್ದು ಮತ್ತು ಅಂಥ ಅಧಿಕಾರಿಯು ಆ ಪ್ರತಿಯನ್ನು ಅವನ ಪುಸ್ತಕ ಸಂಖ್ಯೆ 1ರಲ್ಲಿ ದಾಖಲು ಮಾಡತಕ್ಕದ್ದು.

**X X XX XX**

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾಸೂ , ಪ್ರತಿಗಳು 300, 18ನೇ ಮಾರ್ಚ್ 2025

**KARNATAKA LEGISLATIVE COUNCIL**

**ONE HUNDRED AND FIFTY FIFTH SESSION**

# THE REGISTRATION (KARNATAKA AMENDMENT) BILL, 2025

**(LA Bill No. 13 of 2025)**

**(As passed by the Karnataka Legislative Assembly)**

A Bill further to amend the Registration Act, 1908 (Central Act 16 of 1908) in its application to the State of Karnataka.

Whereas it is expedient further to amend the Registration Act 1908 (Central Act 16 of 1908) in its application to the State of Karnataka for the purposes hereinafter appearing;

Be it enacted by the Karnataka State legislature in the Seventy Sixth year of the Republic of India as follows:-

**1. Short title and commencement.-** (1) This Act may be called the Registration (Karnataka Amendment) Act, 2025.

(2) It shall come into force on such date as the State Government may, by notification in the Official Gazette, appoint.

**2. Amendment of section 17.-** In the Registration Act, 1908 (Central Act 16 of 1908) (hereinafter referred to as the Principal Act), in section 17,-

(i) in sub-section (1), after clause (e), before the proviso, the following shall be inserted, namely:-

“(f) power of attorney authorizing transfer of immovable property with or without consideration:”

(ii) in sub-section (2), clause (vii) and the entries relating thereto shall be omitted.”

**3. Amendment of section 33.-** In the Principal Act, in section 33, in sub-section (4),-

(i) for the words “may be proved”, the words “shall be proved” shall be substituted; and

(ii) after sub-section (4) as so amended, the following proviso shall be inserted, namely:-

“Provided that a proof to the effect that the person executing the power of attorney is alive shall be produced as specified in the rules made under this Act.”

**4. Amendment of Section 89.-** In the Principal Act, in section 89, after sub-section (4), the following shall be inserted, namely:-

“(5) The documents executed by the Government Officers or certain public functionaries as notified under section 88, shall send the documents electronically to the Registering Officer within whose jurisdiction, the whole or any part of the immovable property comprised in the documents is situated, and such officer shall file the said document electronically in his appropriate Book number and shall get the same preserved electronically.”

## STATEMENT OF OBJECTS AND REASONS

## (As appended to at the time of Introduction)

It is considered necessary further to amend the Registration Act, 1908 (Central Act 16 of 1908) in its application to the state of Karnataka to,-

(1) compulsorily register power-of-attorney authorizing transfer of immovable property with or without consideration;

(2) compulsorily register documents relating to any grant of immovable property by the Government;

(3) compulsorily prove any power-of-attorney by producing it;

(4) send the documents electronically to the registering officers by the Government Officers or certain public functionaries as notified under section 88; and

(5) Certain other consequential amendments also made.

Hence, the Bill.

## FINANCIAL MEMORANDUM

There is no extra expenditure involved in the proposed legislative measure.

**KRISHNA BYREGOWDA**
Minister for Revenue

**K.R. MAHALAKSHMI**
Secretary
Karnataka Legislative Council

**ANNEXURE**

## EXTRACT FROM THE REGISTRATION ACT, 1908
## (CENTRAL ACT 16 OF 1908)

**xxx** **xxx** **xxx**

**17. Documents of which registration is compulsory.-**(1) The following documents shall be registered, if the property to which they relate is situate in a district in which, and if they have been executed on or after the date on which, Act No. XVI of 1864, or the Indian Registration Act, 1866, or the Indian Registration Act, 1871, or the Indian Registration Act, 1877, or this Act came or comes into force, namely :-

(a) Instruments of gift of immovable property;

(b) other non-testamentary instruments which purport or operate to create, declare, assign, limit or extinguish, whether in present or in future, any right, title or interest, whether vested or contingent, of the value of one hundred rupees and upwards, to or in immovable property;

(c) Non-testamentary instruments which acknowledge the receipt or payment of any consideration on account of the creation, declaration, assignment, limitation or extinction of any such right, title or interest; and

(d) leases of immovable property from year to year, or for any term exceeding one year, or reserving a yearly rent;

(e) non-testamentary instruments transferring or assigning any decree or order of a Court or any award when such decree or order or award purports or operates to create, declare, assign, limit or extinguish, whether in present or in future, any right, title or interest, whether vested or contingent, of the value of one hundred rupees and upwards, to or in immovable property.

Provided that the State Government may, by order published in the Official Gazette, exempt from the operation of this sub-section any lease executed in any district, or part of a district, the terms granted by which do not exceed five years and the annual rents reserved by which do not exceed fifty rupees.

**xxx** **xxx** **xxx**

**(2)** Nothing in clauses (b) and (c ) of sub-section (1) applies to –

**xxx** **xxx** **xxx**

(vii) any grant of immovable property by Government; or

**xxx** **xxx** **xxx**

**33. Power-of-attorney recognizable for purposes of section 32.-**(1)

**xxx** **xxx** **xxx**

(4) Any power-of-attorney mentioned in this section may be proved by the production of it without further proof when it purports on the face of it to have been executed before and authenticated by the person or Court hereinbefore mentioned in that behalf.

**xxx** **xxx** **xxx**

**89. Copies of certain orders, certificates and instruments to be sent to registering officers and filed.— (**1) Every officer granting a loan under the Land Improvement Loans Act, 1883 (19 of 1883), shall send a copy of his order to the registering officer within the local limits of whose jurisdiction the whole or any part of the land to be improved or of the land to be granted as collateral security, is situate, and such registering officer shall file the copy in his Book No. 1.

(2) Every Court granting a certificate of sale of immovable property under the Code of Civil Procedure, 1908 (5 of 1908), shall send a copy of such certificate to the registering officer within the local limits of whose jurisdiction the whole or any part of the immovable property comprised in such certificate is situate, and such officer shall file the copy in his Book No. 1.

(3) Every officer granting a loan under the Agriculturists' Loans Act, 1884 (12 of 1884), shall send a copy of any instrument whereby immovable property is mortgaged for the purpose of securing the repayment of the loan, and, if any such property is mortgaged for the same purpose in the order granting the loan, a copy also or that order, to the registering officer within the local limits of whose jurisdiction the whole or any part of the property so mortgaged is situate, and such registering officer shall file the copy or copies as the case may be, in his Book No. 1.

(4) Every Revenue Officer granting a certificate of sale to the purchaser of immovable property sold by public auction shall send a copy of the certificate to the registering officer within the local limits of whose jurisdiction the whole or any part of the property comprised in the certificate is situate, and such officer shall file the copy in his Book No. 1.

**xxx** **xxx** **xxx**

Govt. Press, Vikasa Soudha, Bengalur, 18th Mar, 2025, P7, W.D. , Copies 300